**ಸಾಕ್ಷಿಯನ್ನು ಈ ದಿನ ದಿಃ 19.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ನಾನು ಆ ಸಮಯದಲ್ಲಿ ಬಾಡಿಗೆಗೆ ವಾಸವಿದ್ದ ಮನೆ ತಿಮ್ಮೇಗೌಡರಿಗೆ ಸೇರಿದ್ದು. ಅದು ಹೊಸ ಬಡಾವಣೆಯಾಗಿತ್ತು ಎನ್ನುವುದು ಸರಿ . ಅಲ್ಲಿ ಮೋರಿಗಳನ್ನು ಮಾಡಿದ್ದು , ಅವುಗಳ ತುದಿಯಲ್ಲಿ ಲೈಟ್ ಕಂಭಗಳನ್ನು ನೆಟ್ಟಿದ್ದರು ಎನ್ನುವುದು ಸರಿ . ಅಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಸುತ್ತಿದ್ದವರಿಗೆ ವಿದ್ಯುತ್ ಸೌಲಭ್ಯ ಬೇಕಾದಾಗ ಆ ಕಂಭಗಳಿಗೆ ವೈರ್ ಗಳನ್ನು ಎಳೆದು ಕಲ್ಪಿಸುತ್ತಿದ್ದರು ಎನ್ನುವುದು ಸರಿ .

2. ಈ ಘಟನೆ ನಡೆದದ್ದು ಮುಖ್ಯ ರಸ್ತೆಯಲ್ಲಿ ಎನ್ನುವುದು ಸರಿ . ನಮ್ಮ ಮನೆ ಇದ್ದದ್ದು ಅಡ್ಡ ರಸ್ತೆಯಲ್ಲಿ ಎನ್ನುವುದು ಸರಿ . ನಮ್ಮ ಮನೆಯಿಂದ ಒಂದು ಮನೆಯನ್ನು ದಾಟಿದರೆ ಮುಖ್ಯ ರಸ್ತೆ ಸಿಗುತ್ತದೆ. ಅಲ್ಲಿ ಯಾವುದೇ ಬಸ್ಸ ಸ್ಟಾಪ್ ಇರಲಿಲ್ಲ. ಗಲಾಟೆಯಾದ ಸ್ಥಳದ ಎದುರು ಬದುರು ಅಂಗಡಿಗಳಿದ್ದವು. ನಮ್ಮ ಮನೆಯಿಂದ ಮುಖ್ಯ ರಸ್ತೆಗೆ ಹೋಗಿ ಎಡಕ್ಕೆ ತಿರುಗಿದರೆ , ಘಟನಾ ಸ್ಥಳ ಸಿಗುತ್ತದೆ. ಎಡಗಡೆ ತಿರುಗಿದ ನಂತರ , ಎರಡು ಅಂಗಡಿಗಳನ್ನು ದಾಟಿದ ಮೇಲೆ ಘಟನಾ ಸ್ಥಳ ಸಿಗುತ್ತಿತ್ತು.

3. ನಮ್ಮ ಮನೆಯ ಹಿಂಭಾಗದಲ್ಲಿ ಇರುವ ಮಾಳ (ಖಾಲಿ ಜಾಗ ) ದಲ್ಲಿ ಗಣಪತಿಯನ್ನು ಕೂರಿಸಿದ್ದರು. ಆ ದಿನ ಗಣಪತಿಯನ್ನು ಬಿಡುತ್ತಿದ್ದರಿಂದ, ನಾನು ನೋಡಲು ನಮ್ಮ ಮನೆಯ ಮುಂದೆ ನಿಂತಿದ್ದೆ. ನನ್ನ ಗಂಡ ಮನೆಗೆ ಬಂದಿದ್ದರು. ಮನೆಯಲ್ಲಿ ಅಡಿಗೆ ಮಾಡಿದ್ದೆ. ಸಂಜೆ 07.00 ಗಂಟೆಗೆ ಅಡುಗೆ ಮಾಡಿ ಮುಗಿಸಿದ್ದೆ. ನಮ್ಮ ಮನೆಯ ಮುಂದೆ ಗಣೇಶನ ಮೆರವಣಿಗೆ ಬಂದಾಗ ರಾತ್ರಿ 08.00 ರಿಂದ 08.15

ಆಗಿತ್ತು. ನಮ್ಮ ಮನೆಯ ಮುಂದೆ ಗಣಪತಿ ಮೆರವಣಿಗೆ ಬಂದಾಗ ಯಾವುದೇ ಗಲಾಟೆ ಇನ್ನೂ ನಡೆದಿರಲಿಲ್ಲ. ಆಗ ಗಾಯಗೊಂಡವರು ಮುಖ್ಯ ರಸ್ತೆಯಲ್ಲಿರುವ ಅಂಗಡಿಯ ಬಳಿಯಲ್ಲಿ ಕುಳಿತಿದ್ದರು. ನಮ್ಮ ಮನೆಯಿಂದ ಮುಖ್ಯ ರಸ್ತೆಗೆ ಹೋಗಿ ಎಡಕ್ಕೆ ತಿರುಗುವವರೆಗೂ ಆ ಅಂಗಡಿ ಕಾಣುವುದಿಲ್ಲ ಎನ್ನುವುದು ಸರಿ. ಆ ಗಣೇಶನ ಮೆರವಣಿಗೆಯಲ್ಲಿ ಈ ಆರೋಪಿತರನ್ನು ನಾನು ನೋಡಿದ್ದೆ. ಗಣೇಶನ ಮೆರವಣಿಗೆ ನಮ್ಮ ಮನೆಯಿಂದ ಕೆಳಗಡೆ ಹೋಯಿತು. ನಂತರ ವಿಸರ್ಜನೆ ಮಾಡಿದರು. ವಿಸರ್ಜನೆ ಮಾಡುವವರೆಗೂ ಯಾವುದೇ ಗಲಾಟೆ ಆಗಿರಲಿಲ್ಲ. ಸಾಕ್ಷಿ ಪುನಃ ನುಡಿಯುತ್ತಾರೆ ಗಣೇಶನ ಮೆರವಣಿಗೆ ಮುಂದೆ ಹೋದ ನಂತರ ಈ ಕಡೆ ಗಲಾಟೆ ಪ್ರಾರಂಭವಾಯಿತು ಎಂದು. ಈ ಆರೋಪಿತರು ಗಣೇಶನನ್ನು ವಿಸರ್ಜನೆ ಮಾಡಲು ಹೋಗಿರಲಿಲ್ಲ. ಅಲ್ಲಿ ಗಣೇಶನನ್ನು ಕೂರಿಸಿದವರು ಸಣ್ಣ ಸಣ್ಣ ಮಕ್ಕಳು. ಅವರೊಂದಿಗೆ ಈ ಆರೋಪಿತರು ಸಹ ಸೇರಿಕೊಂಡಿದ್ದರು. ಗಣೇಶನನ್ನು ಕೂರಿಸಲು ಹಣದ ಖರ್ಚನ್ನು ಯಾರು ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

4. ಕಾಂಗ್ರೆಸ್ಸ್ ಮತ್ತು ದಳ ರಾಜಕೀಯ ಪಕ್ಷದ ನಡುವೆ ಗಲಾಟೆ ಇತ್ತು. ಹೊಡೆಸಿಕೊಂಡವರ ಕಡೆಯವರು ಕಾಂಗ್ರೆಸ್ಸ ಪಕ್ಷದಿಂದ ಗೆದಿದ್ದರು. ದಳದವರು ಸೋತಿದ್ದರು. ಈ ಬಗ್ಗೆ ಮತ್ಸರ/ ದ್ವೇಷ ಇತ್ತು. ಹೀಗಾಗಿ ಅಂಗಡಿ ಒಳಗೆ ಕೂತಿದ್ದವರನ್ನು ಹೊರಕ್ಕೆ ನೂಕಿಕೊಂಡು ಕರೆದುಕೊಂಡು ಬಂದು ಹೊಡೆದರು. ಅಂಗಡಿ ಒಳಗೆ ಇದ್ದವರು ನಾರಾಯಣಪ್ಪ ಎನ್ನುವವರು. ಗಲಾಟೆ ಆಗಲು ಇದೇ ಕಾರಣವಾಗಿತ್ತು.

5. ಚುನಾವಣೆ ಮುಗಿದು **2-3** ತಿಂಗಳುಗಳಾಗಿದ್ದವು. ಅಲ್ಲಿ ಗಣೇಶನನ್ನು ಕೂರಿಸಲು, ಗಾಯಾಳು ಮತ್ತು ಆರೋಪಿತರು ಸೇರಿ ಖರ್ಚನ್ನು ಭರಿಸಿದ್ದರು ಎನ್ನುವುದು ಸರಿ .

6. ಗಣೇಶನ ಮೆರವಣಿಗೆ ನಮ್ಮ ಮನೆಯ ಮುಂದೆ ಹಾದು ಹೋದ ನಂತರ ನಾನು ಮನೆಯ ಮುಂದೆಯೇ ನಿಂತಿದ್ದೆ. ಆಗ ಮುಖ್ಯ ರಸ್ತೆಯಲ್ಲಿ ಆದ ಗಲಾಟೆಯ ಶಬ್ದ ನನಗೆ ಕೇಳಿತು. ಆಗ ನಾನು ಆ ಸ್ಥಳಕ್ಕೆ ಓಡಿ ಹೋದೆ. ನಾನು ಹೋದಾಗ ನಾರಾಯಣಪ್ಪನವರಿಗೆ ಹೊಡೆಯುತ್ತಿದ್ದರು. ಅವರ ಕತ್ತು ಮತ್ತು ಕೈಗೆ ಹೊಡೆದರು. ನಾನು ಅಲ್ಲಿಗೆ ಹೋದಾಗ **5-6** ಜನ ಇದ್ದರು. ನಾವು ಕೂಗಿಕೊಂಡಾಗ ಬೇರೆಯವರು ಬಂದರು. ನಮ್ಮ ಮನೆಯ ಮುಂದೆ ನಿಂತಲ್ಲಿ ಆ ಮುಖ್ಯ ರಸ್ತೆಯಲ್ಲಿರುವ ಅಂಗಡಿ ಕಾಣುತ್ತದೆ. ಆ ಮುಖ್ಯ ರಸ್ತೆಯ ಎಡ ಭಾಗದಲ್ಲಿ ಅಂಗಡಿ ಇತ್ತು. ಆ ಅಂಗಡಿಗೆ ಹಿಂದಿನ ಗೋಡೆ ಇತ್ತು. ನಮ್ಮ ಮನೆಯ ಪಕ್ಕದಲ್ಲಿ ಖಾಲಿ ನಿವೇಶನ ಇತ್ತು. ಆ ಮುಖ್ಯ ರಸ್ತೆಯಲ್ಲಿ **6** ಅಂಗಡಿಗಳು ಇವೆ. ಈ ಘಟನೆ ನಡೆದದ್ದು **5** ನೇ ಅಂಗಡಿಯಲ್ಲಿ. ನಮ್ಮ ಮನೆಯ ಮುಂದೆ ನಿಂತರೆ ಆ ಅಂಗಡಿ ಪೂರ್ತಿಯಾಗಿ ಕಾಣುತ್ತದೆ. ಈ ಗಲಾಟೆ ಪ್ರಾರಂಭವಾದಾಗ ನಮ್ಮ ಮನೆಯ ಬಳಿ ಇರುವ ಸೇತುವೆ ಹತ್ತಿರ ಕುಳಿತಿದ್ದೆ.

7. ನ್ಯಾಯಾಧೀಶರ ಮುಂದೆ ಘಟನೆಯ ಬಗ್ಗೆ ಹೇಳಬೇಕು ಎಂದು ನಾನು ಖುದ್ದು ಹೋಗಿದ್ದೆ. ನಾನೂ ಮತ್ತು ಚಾ,ಸಾ. **5** ನ್ಯಾಯಾಲಯಕ್ಕೆ ಹೋಗಿದ್ದೆವು. ಗಾಯಾಳು ಸಹ ಜೊತೆಯಲ್ಲಿ ಬಂದಿದ್ದರು. ನಮ್ಮ ಜೊತೆ ಪೋಲೀಸರು ಬಂದಿರಲಿಲ್ಲ. ಪೋಲೀಸರು ಪೋನ್ ಮಾಡಿ ಇಂತಹ ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿದ್ದರು. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುತ್ತೇನೆ ಎಂದು ಬರವಣಿಗೆಯಲ್ಲಿ ಪೋಲೀಸರಿಗೆ

ನೀಡಿದ್ದೆ. ಪೋಲೀಸರು ನನ್ನನ್ನು ಖುದ್ದು ವಿಚಾರಿಸಿ ಘಟನೆಯ ಬಗ್ಗೆ ಬರೆದುಕೊಂಡಿರುವುದಿಲ್ಲ. ಪೋಲೀಸ್ ಠಾಣೆಯಲ್ಲಿ ಕೇಳಿ ವಿಚಾರಿಸಿದರು. ನನ್ನ ಎದುರು ಯಾವುದೇ ಬರವಣಿಗೆಯನ್ನು ಪೋಲೀಸರು ಮಾಡಿಕೊಂಡಿರುವುದಿಲ್ಲ.

**8.** ಘಟನೆ ನಡೆಯಿತು ಎನ್ನಲಾದ ಸ್ಥಳ ನಮ್ಮ ಮನೆಯಿಂದ ಕಾಣಿಸುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

**9.** ಗಾಯಾಳು ಮತ್ತು ಆರೋಪಿತರು ಒಟ್ಟಾಗಿ ಚೆನ್ನಾಗಿದ್ದುದ್ದನ್ನು ಚುನಾವಣೆಯ ಸಮಯದಲ್ಲಿ ನೋಡಿದ್ದೆ. ಆಗ ಗಣೇಶ ಹಬ್ಬದಂದೂ ಸಹ ಎಲ್ಲರು ಚೆನ್ನಾಗಿ ಒಟ್ಟಾಗಿ ಹಬ್ಬ ಮಾಡಿದರು ಎನ್ನುವುದು ಸರಿ .

**10.** ಅಲ್ಲಿ ಯಾವುದೇ ಬೀದಿ ದೀಪಗಳು ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಘಟನೆಯನ್ನು ನೋಡಿರುವುದೇ ಇಲ್ಲ ಎನ್ನುವುದು ಸರಿಯಲ್ಲ. ನನಗೆ ಬಾಡಿಗೆ ಮನೆಯನ್ನು ಮಾಡಿಕೊಟ್ಟವರು ಗಾಯಾಳು ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಇನ್ನೊಂದು ನ್ಯಾಯಾಲಯದ ಮುಂದೆ ನಾನು ಹೇಳಿರುವ ಹೇಳಿಕೆಯನ್ನು, ಗಾಯಾಳು ರವರು ಹೇಳಿದಂತೆ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ಘಟನಾ ಸ್ಥಳಕ್ಕೆ ನನ್ನ ಗಂಡ ಸಹ ಬಂದಿದ್ದರು.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**